# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎಸ್.ಸಿ. ನಂ. 57/2022

ಪಿಡಬ್ಲ್ಯೂ: 13
ಸಿಡಬ್ಲ್ಯೂ: 02

<u>ದಿನಾಂಕಃ **11-06-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

| | |
|---|---|
| ಸಾಕ್ಷಿದಾರರ ಹೆಸರು | : ಶ್ರೀಮತಿ ಜಯಶೀಲ |
| ಗಂಡನ ಹೆಸರು | : ಶಿವಮೂರ್ತಿ |
| ವಯಸ್ಸು | : 43 ವರ್ಷ |
| ಉದ್ಯೋಗ | : ಪಿಡಿಒ, ಲಕ್ಷ್ಮೀಸಾಗರ ಗ್ರಾಮ ಪಂಚಾಯಿತಿ, ಚಿತ್ರದುರ್ಗ ತಾಲ್ಲೂಕು |
| ವಾಸ ಸ್ಥಳ | : ಚಿತ್ರದುರ್ಗ |

<u>**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**</u>

ನವೆಂಬರ್ **2023** ರಿಂದ ನಾನು ಲಕ್ಷ್ಮೀಸಾಗರ ಗ್ರಾಮದಲ್ಲಿ ಪಿಡಿಒ ಒಂದು ಸೇವೆ ಸಲ್ಲಿಸುತ್ತಿದ್ದೇನೆ. ಈ ಪ್ರಕರಣವಾಗುವ ಕಾಲಕ್ಕೆ ನಾನು ಆಲಘಟ್ಟ ಗ್ರಾಮದಲ್ಲಿ ಪಿಡಿಒ ಒಂದು ಸೇವೆ ಸಲ್ಲಿಸುತ್ತಿದ್ದೆ. ದಿನಾಂಕ **07–01–2022** ರಂದು ಕೊಲೆ ನಡೆದಿದೆ ಎಂಬ ಕಾರಣಕ್ಕಾಗಿ ಡಿವೈಎಸ್ ಪಿ ರವರು ನನಗೂ ಮತ್ತು ನಮ್ಮ ಕ್ಲರ್ಕ್ ಇವರಿಗೆ ನೋಟಿಸ್ ಕೊಟ್ಟು ಪಂಚನಾಮೆಗೆ ಬರಬೇಕೆಂದು ತಿಳಿಸಿದರು. ಪ್ರಕರಣದ ಪಿರ್ಯಾದುದಾರ ಕರಿಯಪ್ಪ ಇವರ ಮಗಳಾದ ಸುಮ ಇವರನ್ನು ಕೊಲೆ ಮಾಡಿ ರಾಜಪ್ಪ ಬಿನ್ ನಾರಪ್ಪ ಇವರು ವಾಸ ಮಾಡುವ ಮನೆಯಲ್ಲಿ ಹೂತು ಹಾಕಲಾಗಿದೆ ನಮಗೆ ತಿಳಿಸಲಾಯಿತು.

ಈ ಹಂತದಲ್ಲಿ ಮಾನ್ಯ ಪಿಪಿರವರ ಕೋರಿಕೆಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

<u>ದಿನಾಂಕಃ **25-11-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>

**2.** ಆ ಸ್ಥಳವನ್ನು ಸುಮಾರವರ ತಂದೆ ಕರಿಯಪ್ಪ ತೋರಿಸಿದರು. ಆ ಮನೆಯಲ್ಲಿ ನಮ್ಮನ್ನು ಕರೆದುಕೊಂಡು ಹೋಗಿ ತೋರಿಸಿದಾಗ ಅದು ಮೂರು ಕೋಣೆಗಳ ಮನೆ ಎಂಬುದು ಗೊತ್ತಾಯಿತು. ಆ ಮನೆಯ ಮದ್ಯದ ಹಾಲ್ ನಲ್ಲಿ ಕಡಪ ಬಂಡೆಯ ಅಡಿಯಲ್ಲಿ ಶವವನ್ನು ಹೂತುಹಾಕಲಾಗಿತ್ತು. ಅದನ್ನು ನಮಗೆ ತೋರಿಸಲಾಯಿತು. ಆ ಮಹಜರನ್ನು ಮದ್ಯಾಹ್ನ **12.00 – 12.40** ರ ಅವಧಿಯಲ್ಲಿ ಮಾಡಲಾಯಿತು. ಅದನ್ನು ನೋಡುತ್ತಿದ್ದು ಸದರಿ ಮಹಜರನ್ನು ನಿಪಿ.**2** ಎಂದು ಈಗಾಗಲೇ ಗುರುತಿಸಲಾಗಿದ್ದು ನನ್ನಸಹಿಯನ್ನು ನಿಪಿ–**2**(ಬಿ) ಎಂದು ಗುರುತಿಸಲಾಯಿತು. ಸದರಿ ಮಹಜರಿಗೆ ತಿಪ್ಪೇಸ್ವಾಮಿರವರು ಕೂಡಾ ಸಹಿ ಮಾಡಿರುತ್ತಾರೆ. ಈಗ ನನಗೆ ತೋರಿಸಲಾದ ನಿಪಿ–**3** ಹಾಗೂ **4** ಪೊಟೋಗಳಲ್ಲಿ ನಾನು ಇರುವುದು ಕಂಡುಬರುತ್ತದೆ.

**3.** ನಂತರ ಅಸಿಸ್ಟೆಂಟ್ ಕಮಿಷನರ್ ರವರು ಬಂದರು ಅವರು ಬಂದ ನಂತರ ಮದ್ಯಾಹ್ನ **1.00** ರಿಂದ **3.00** ರ ಅವಧಿಯಲ್ಲಿ ಶವ ತನಿಖಾ ಪಂಚನಾಮೆಯನ್ನು ಮಾಡಲಾಯಿತು. ಆ ಶವವನ್ನು ನೆಲದಿಂದ ತೆಗೆಯಲಾಯಿತು. ನಮ್ಮ ಡಿ ಗ್ರೂಪ್ ನೌಕರರಿಂದ ಆ ಶವವನ್ನು ಹೊರಗೆ ತೆಗೆಸಲಾಯಿತು. ಆಗ ನನ್ನ ಸಹಿಯನ್ನು ಕೂಡಾ ಪಡೆಯಲಾಗಿದೆ. ಸಆ ಶವದ ಪೊಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ–**5** ಹಾಗೂ **6** ಎಂದು ಈಗಾಗಲೇ ಗುರುತಿಸಲಾಗಿದೆ. ಲಲಿತಮ್ಮ, ಕರಿಬಸಪ್ಪ, ಬಸವರಾಜಪ್ಪ, ಮಮತಾ ಹಾಗೂ ಸಿದ್ದಲಿಂಗಪ್ಪ ರವರ ಸಹಿಗಳನ್ನು ಕೂಡಾ ಪಂಚನಾಮೆಗೆ ಪಡೆಯಲಾಯಿತು. ಆ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಿಕೊಡಲಾಯಿತು. ಆ ನಂತರ ಮತ್ತೆ ಆ ಸ್ಥಳದ ಉದ್ದ ಅಗಲ ಇವುಗಳನ್ನು ಅಳತೆ ಮಾಡಿದರು. ಆ ಶವವನ್ನು ಬೆಡ್‌ಶೀಟ್ ನಲ್ಲಿ ಸುತ್ತಲಾಗಿತ್ತು. ಆ ಬೆಡ್‌ಶೀಟನ್ನು ನೋಡಿದರೆ ಗುರುತಿಸಬಲ್ಲೆ. ಅದನ್ನು ನೋಡುತ್ತಿದ್ದು ಸದರಿ ಬಿಡ್‌ಶೀಟನ್ನು ಈಗಾಗಲೇ ಮುದ್ದೆ ಮಾಲು **24** ಎಂದು ಗುರುತಿಸಲಾಗಿದೆ. ಅ ಶವದ ಮೈಮೇಲಿದ್ದ ನೈಟಿಯನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **20** ಎಂದು ಈಗಾಗಲೇ ಗುರುತಿಸಲಾಗಿದೆ. ಆ ಗುಂಡಿ ಸುಮಾರು ಆರು ಅಡಿ ಉದ್ದ ಇತ್ತು, ಎರಡೂವರೆ ಅಡಿ ಅಗಲ ಇತ್ತು ಮತ್ತು ಸುಮಾರು ಎರಡು ಅಡಿ ಆಳ ಇತ್ತು. ಮದ್ಯಾಹ್ನ **3.00** ರಿಂದ **3.45** ರವರೆಗೆ ಆ ಸ್ಥಳವನ್ನು ಪರಿಶೀಲನೆ ಮಾಡಲಾಯಿತು.

**4.** ಮದ್ಯಾಹ್ನ **4.00** ರಿಂದ **4.45** ರವರೆಗೆ ಆ ಮನೆಯ ಅಂಗಳದಲ್ಲಿ ಗೃಹಪಯೋಗಿ ವಸ್ತುಗಳು, ಬೆಳ್ಳಿಯ ಸಾಮಾನುಗಳು ಹಾಗೂ ಪೂಜಾ ಸಾಮಾನುಗಳು ಈ ರೀತಿ ಒಟ್ಟು **17**

ಸಾಮಾನುಗಳನ್ನು ಇಟ್ಟು ಮಹಜರ್ ಮಾಡಿದರು. ಆ ಮಹಜರಿಗೂ ಕೂಡಾ ನನ್ನ ಸಹಿ ಪಡೆಯಲಾಯಿತು. ಅವುಗಳನ್ನು ವರದಕ್ಷಿಣೆ ರೂಪದಲ್ಲಿ ನೀಡಲಾಗಿದೆ ಎಂದು ನಮಗೆ ತಿಳಿಸಿದರು. ಆ ಮಹಜರನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–**10** ಎಂದು ಗುರುತಿಸಲಾಗಿದ್ದು ನನ್ನ ಸಹಿಯನ್ನು ನಿಪಿ–**10**(ಬಿ) ಎಂದು ಗುರುತಿಸಲಾಯಿತು. ಆಗ ತೆಗೆಯಲಾದ ಪೊಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ–**11** ಹಾಗೂ **12** ಎಂದು ಈಗಾಗಲೇ ಗುರುತಿಸಲಾಗಿದೆ. ಆ ವಸ್ತುಗಳನ್ನು ನೋಡುತ್ತಿದ್ದು ಅವುಗಳನ್ನು ಮುದ್ದೆ ಮಾಲು **1** ರಿಂದ **13** ಎಂದು ಈಗಾಗಲೇ ಗುರುತಿಸಲಾಗಿದೆ.

ಈ ಹಂತದಲ್ಲಿ ಅಭಿಯೋಜಕರ ಕೋರಿಕೆಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

**ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

**5.** ಮುದ್ದೆ ಮಾಲು **14** ರಿಂದ **17** ಇವುಗಳನ್ನು ಕೂಡಾ ನೋಡುತ್ತಿದ್ದು ಅವುಗಳನ್ನು ಗುರುತಿಸುತ್ತೇನೆ.

**ಪಾಟೀ ಸವಾಲು: ಶ್ರೀಮತಿ ಎಂ.ಬಿ. ವಕೀಲರಿಂದ ಆರೋಪಿತನ ಪರವಾಗಿಃ**

**6.** ನನಗೆ ಡಿವೈ.ಎಸ್.ಪಿ.ಯವರು ನೋಟೀಸನ್ನು ನೀಡಿದ್ದರು. ನಮ್ಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುತ್ತಿದ್ದ ಕಾರಣ ನಾನು ನೇರವಾಗಿ ಆ ಸ್ಥಳಕ್ಕೆ ಹೋದೆ. ನಾವು ಹೋಗುವ ಮೊದಲು ಅಲ್ಲಿ ಸಾರ್ವಜನಿಕರು ಹಾಗೂ ಪೊಲೀಸರು ಇದ್ದರು. ಆ ಮನೆಗೆ ಸೀಲ್ ಹಾಕಲಾಗಿತ್ತು, ಆ ಸೀಲನ್ನು ಡಿವೈ.ಎಸ್.ಪಿ.ಯವರ ಸಮಕ್ಷಮ ತೆಗೆಯಲಾಯಿತು. ಆ ಸೀಲನ್ನು ಯಾರು ಮತ್ತು ಯಾವಾಗ ಹಾಕಿದ್ದರೆಂದು ನನಗೆ ಗೊತ್ತಿಲ್ಲ. ನಾವು ಹೋದಾಗ ಅಲ್ಲಿ ಕರಿಯಪ್ಪ ಇದ್ದ. ಆ ಸೀಲನ್ನು ತೆಗೆಯುವ ಕಾಲಕ್ಕೆ ಅದನ್ನು ಚಿತ್ರೀಕರಿಸಿಕೊಂಡರೋ ಹೇಗೆ ಎಂದು ನೆನಪಿಲ್ಲ. ಮಹಜರ್ ಮಾಡುವ ಕಾಲಕ್ಕೆ ಡಿವೈ.ಎಸ್.ಪಿ.ಯವರು ಹಾಜರಿದ್ದರು. ನಾನು ಆ ಸ್ಥಳಕ್ಕೆ ಹೋದಾಗ ಸುಮಾರು ಮುಂಜಾನೆ **10.30** ಗಂಟೆಯಾಗಿತ್ತು.

**7.** ಮೊದಲನೇ ಮತ್ತು **2** ನೇ ಮಹಜರ್ ಗಳ ಮದ್ಯದ ಅವಧಿಯಲ್ಲಿ ನಾನೇನು ಕಛೇರಿಗೆ ಹೋಗಲಿಲ್ಲ. ಸಂಜೆಯವರೆಗೆ ಆ ದಿನ ನಾನು ಅಲ್ಲಿಯೇ ಇದ್ದೆ. ಆಗ ತಹಶೀಲ್ದಾರ್, ಎ.ಸಿ., ಡಿವೈ.ಎಸ್.ಪಿ., ಪೊಲೀಸ್ ಇನ್ಸ್ ಪೆಕ್ಟರ್ ಹಾಗೂ ಇನ್ನಿತರ ಪೊಲೀಸ್ ಸಿಬ್ಬಂದಿಗಳು ಇದ್ದರು, ಆದರೆ ಎಷ್ಟು ಸಂಖ್ಯೆಯ ಸಿಬ್ಬಂದಿಗಳು ಇದ್ದರೆಂದು ಹೇಳಲು ಬರುವುದಿಲ್ಲ. ಆ ಮನೆಯ ಎಲ್ಲಾ ಭಾಗವನ್ನು ಪೊಲೀಸರು ಶೋಧನೆ ಮಾಡಿದರು. ಆ ಶೋಧನೆಯ ಕಾಲಕ್ಕೆ ಅವರು ಪೊಟೋ ತೆಗೆದರು, ಚಿತ್ರೀಕರಣ ಮಾಡಿದರು. ನಿಪಿ–**3** ರಲ್ಲಿ ಬಾಗಿಲು ಮುಚ್ಚಿರುವಂತಹ ಮನೆ ಆರೋಪಿತನ ತಂದೆಯದ್ದು. ಆತನ ತಂದೆಯ ಮನೆಯಲ್ಲಿ ಯಾರಾದರೂ ವಾಸವಾಗಿದ್ದರೋ ಹೇಗೆ ಎಂದು ನಾವು ಪರಿಶೀಲಿಸಿಲ್ಲ. ನಿಪಿ–**4** ರಲ್ಲಿ ನೇತು ಹಾಕಿರುವಂತಹ ಬಟ್ಟೆಗಳನ್ನು ಮತ್ತು ಆ ಪೊಟೋದ ಅಡಿಯಲ್ಲಿ ಕಂಡುಬರುವಂತಹ ಚಾಪೆಯನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡರೋ ಹೇಗೆ ಎಂದು ಗೊತ್ತಿಲ್ಲ. ಶವ ತೆಗೆದಂತಹ ಸ್ಥಳವನ್ನು ಮತ್ತೆ ಕಲ್ಲು ಹಾಕಿ ಮುಚ್ಚಲಾಗಿಲ್ಲ. ಮುದ್ದೆ ಮಾಲು **14** ರಿಂದ **17** ಚಿಕ್ಕ ಮಕ್ಕಳಿಗೆ ಸಂಬಂಧಿಸಿದಂತಹ ಆಭರಣಗಳು ಎನ್ನುವುದು ನಿಜ.

**8.** ಸಾಮಾನ್ಯವಾಗಿ ಮುದ್ದೆ ಮಾಲು **1** ರಿಂದ **13** ರಂತಹ ವಸ್ತುಗಳು ಒಂದು ಕುಟುಂಬದ ಅಡಿಗೆ ಮನೆಯಲ್ಲಿ ಕಂಡುಬರುತ್ತವೆ ಎನ್ನುವುದು ನಿಜ. ಆ ವಸ್ತುಗಳನ್ನು ಕರಿಯಪ್ಪ ಒಬ್ಬರು ಪೊಲೀಸರನ್ನು ಕರೆದುಕೊಂಡು ಹೋಗಿ ಮನೆಯ ಒಳಗಿಂದ ತೆಗೆದುಕೊಂಡು ಬಂದ. ನಾನೇನು ಒಳಗಡೆ ಹೋಗಿಲ್ಲ. ಆ ಮನೆಯ ಯಾವ ಭಾಗದಲ್ಲಿ ಆ ಮುದ್ದೆ ಮಾಲು ಇದ್ದವು ಎಂದು ನನಗೆ ಗೊತ್ತಿಲ್ಲ. ಸದರಿ ಮುದ್ದೆ ಮಾಲುಗಳ ಮಹಜರ್ ಮಾಡುವ ಕಾಲಕ್ಕೆ ಎ.ಸಿ ಮತ್ತು ತಹಶೀಲ್ದಾರ್ ಇರಲಿಲ್ಲ ಆದರೆ ಡಿವೈ.ಎಸ್.ಪಿ. ಇದ್ದರು. ಆ ಮಹಜರ್ ಗಳನ್ನು ಮಾಡಿದ ನಂತರ ಆ ಮನೆಗೆ ಮತ್ತೆ ಸೀಲು ಮಾಡಲಾಯಿತೋ ಅಥವಾ ಬಾಗಿಲುಗಳಿಗೆ ಲಾಕ್ ಹಾಕಲಾಯಿತೋ ಹೇಗೆ ಎಂದು ನನಗೆ ಗೊತ್ತಿಲ್ಲ. ಸಂಜೆ **5.00– 5.30** ರವರೆಗೆ ನಾನು ಆ ಸ್ಥಳದಲ್ಲಿ ಇದ್ದೆ. ಅಲ್ಲಿಯವರೆಗೆ ಆ ಮನೆಯ ಬಾಗಿಲು ತೆರೆದಿತ್ತು. ಆ ಮೂರು ಮಹಜರುಗಳಿಗೆ ನಾನು ಮುಂಜಾನೆಯಿಂದ ಸಂಜೆಯವರೆಗೆ ಇದ್ದ ಕಾರಣ ಒಮ್ಮೆಲೇ ನನ್ನ ಸಹಿಗಳನ್ನು ಪಡೆಯಲಾಯಿತು ಎನ್ನುವುದು ಸರಿಯಲ್ಲ. ಆ ಮಹಜರುಗಳಿಗೆ ನಾನು ಸಹಿಗಳನ್ನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ–**10** ರಲ್ಲಿ ಮುದ್ದೆ ಮಾಲು **1** ರಿಂದ **17** ಇವುಗಳನ್ನು ವರದಕ್ಷಿಣೆಯಾಗಿ ನೀಡಿದ್ದೆ ಎಂದು ಕರಿಯಪ್ಪ ಹೇಳಿದ ಬಗ್ಗೆ ನಮೂದಿಸಲಾಗಿಲ್ಲ ಎಂದರೆ ಅಲ್ಲಿ ಆತ ನಮ್ಮ ಸಮಕ್ಷಮ ಹಾಗೆ ಹೇಳಿದ.ನಾನು ಅದನ್ನು ಓದಿ ಸಹಿ ಮಾಡಿದ್ದೇನೆ ಎನ್ನುವುದು ನಿಜ. ಅದರಲ್ಲಿ ಅವುಗಳ ಬಗ್ಗೆ ಕರಿಯಪ್ಪ ಆ ರೀತಿ ಹೇಳಿಲ್ಲ ಎಂದರೆ ಇರಬಹುದು.

**9**. ನಾನು ಆ ದಿನ ಮುಂಜಾನೆ **10.30** ರಿಂದ ಸಂಜೆ **5.30** ರವರೆಗೆ ಅಲ್ಲಿ ಇದ್ದೆ, ಅಲ್ಲಿ ನನ್ನ ಸಮಕ್ಷಮ ಮಹಜರ್ ಗಳನ್ನು ಜರುಗಿಸಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.